ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: **DTE-ADMI0JSP/6/2022-JD**

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ,
ಬೆಂಗಳೂರು-560001.
ದಿನಾಂಕ: 22-07-2022

**ಸುತ್ತೋಲೆ**

ವಿಷಯ: ಏಕೀಕೃತ ಸಾರ್ವಜನಿಕ ದೂರು ನಿವಾರಣಾ ವ್ಯವಸ್ಥೆ/ ತಂತ್ರಾಂಶ (Integrated Public Grievance Redressal System)ದಲ್ಲಿ ಲಾಗಿನ್ ಮಾಡಿ ಕುಂದುಕೊರತೆಗಳು/ದೂರುಗಳನ್ನು ಪರಿಹರಿಸುವ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 29 ಪಿಆರ್‌ಜೆ 2020, ಬೆಂಗಳೂರು, ದಿನಾಂಕ: 09-08-2021.
2. ಪತ್ರ ಸಂಖ್ಯೆ: ಡಿಟಿಇ/06/ಇ.ಜ.ಸ್ಪ/2021-22, ದಿನಾಂಕ: 02-09-2021.
3. ಪತ್ರ ಸಂಖ್ಯೆ: ಡಿಟಿಇ/06/ಇ.ಜ.ಸ್ಪ/2021-22, ದಿನಾಂಕ: 04-10-2021.
4. ಸರ್ಕಾರದ ಕಾರ್ಯದರ್ಶಿ, ಸಿಆಸುಇ(ಇ-ಆಡಳಿತ)ರವರ ಪತ್ರ ಸಂಖ್ಯೆ: CEG-PGRS0ADMN/14/2021-PGRS, ದಿನಾಂಕ: 14-07-2022.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರವು ಏಕೀಕೃತ ಸಾರ್ವಜನಿಕ ದೂರು ನಿವಾರಣಾ ವ್ಯವಸ್ಥೆ / ತಂತ್ರಾಂಶ (Integrated Public Grievance Redressal System)ಕ್ಕೆ ಸಂಬಂಧಿಸಿದಂತೆ ಉಲ್ಲೇಖ(1)ರಲ್ಲಿ ಮಾರ್ಗಸೂಚಿಗಳನ್ನು ಬಿಡುಗಡೆಗೊಳಿಸಿ IPGRS ವ್ಯವಸ್ಥೆ / ತಂತ್ರಾಂಶವನ್ನು ಅನುಷ್ಠಾನಗೊಳಿಸಿದೆ.

ಉಲ್ಲೇಖ(2)ರಲ್ಲಿ ಏಕೀಕೃತ ಸಾರ್ವಜನಿಕ ದೂರು ನಿವಾರಣಾ ವ್ಯವಸ್ಥೆ /ತಂತ್ರಾಂಶ (Integrated Public Grievance Redressal System) ಅನುಷ್ಠಾನದ ಮಾರ್ಗಸೂಚಿಗಳ ಅನ್ವಯ ಕ್ರಮವಹಿಸುವುದು ಹಾಗೂ ನಿಗಧಿತ ಅವಧಿಯೊಳಗೆ ಕುಂದುಕೊರತೆಗಳು/ದೂರುಗಳನ್ನು ವಿಲೇ ಮಾಡಲು ಕ್ರಮ ಕೈಗೊಳ್ಳುವ ಬಗ್ಗೆ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಿ L1, L2 ಮತ್ತು L3 ಅಧಿಕಾರಿಗಳ ಗಮನಕ್ಕೆ ತರಲಾಗಿದೆ.

ಉಲ್ಲೇಖ(3)ರಲ್ಲಿ IPGRSನ ವ್ಯವಸ್ಥೆಯಲ್ಲಿ L1, L2 ಮತ್ತು L3 ಅಧಿಕಾರಿಗಳ ಮೊಬೈಲ್ ಸಂಖ್ಯೆಯನ್ನು ಈಗಾಗಲೇ ನೋಂದಣಿ ಮಾಡಲಾಗಿದ್ದು, L1, L2 ಮತ್ತು L3 ಅಧಿಕಾರಿಗಳು ಪ್ರತಿದಿನ IPGRSನ ವೆಬ್‌ಸೈಟ್‌ಗೆ ನೋಂದಣಿಯಾಗಿರುವ ಮೊಬೈಲ್ ಸಂಖ್ಯೆಯಿಂದ ಲಾಗಿನ್ ಮಾಡಿ ನಂತರ ಬರುವ OTP/ODPಯನ್ನು ನಮೂದಿಸಿ ಕುಂದುಕೊರತೆಗಳು/ದೂರುಗಳನ್ನು ವೀಕ್ಷಿಸಿ, IPGRSನ ಮಾರ್ಗಸೂಚಿಗಳನ್ನು ಪಾಲಿಸಿ ನಿಗಧಿತ ಅವಧಿಯೊಳಗೆ ಕುಂದುಕೊರತೆಗಳು/ದೂರುಗಳನ್ನು ನಿವಾರಣೆ ಮಾಡಲು ತಿಳಿಸಲಾಗಿದೆ.

ಆದಾಗ್ಯೂ, ಹಲವು L1, L2 ಮತ್ತು L3 ಅಧಿಕಾರಿಗಳು IPGRSನ ವೆಬ್‌ಸೈಟ್‌ಗೆ ನೋಂದಣಿಯಾಗಿರುವ ಮೊಬೈಲ್ ಸಂಖ್ಯೆಯಿಂದ ಪ್ರತಿ ದಿನ ಲಾಗಿನ್ ಮಾಡದೇ ಇರುವುದರಿಂದ ಕುಂದುಕೊರತೆಗಳು ಹಾಗೆಯೇ ಉಳಿದು L1 ಇಂದ L2ಗೆ, L2 ಇಂದ L3 ಅಧಿಕಾರಿಗಳಿಗೆ auto escalate ಆಗುತ್ತಿರುವುದು ಹಾಗೂ IPGRS ಕಾಲ್ ಸೆಂಟರ್ ನಂಬರ್ ಆದ 1902 ಇಂದ ಬಾಕಿ ಇರುವ ಕುಂದುಕೊರತೆಗಳು/ದೂರುಗಳನ್ನು ಪರಿಹರಿಸಲು ಸಂಬಂಧಪಟ್ಟ L1, L2 ಮತ್ತು L3 ಅಧಿಕಾರಿಗಳಿಗೆ ಕರೆ ಮಾಡಿದಾಗ ಕರೆ ಸ್ವೀಕರಿಸದೇ ಇರುವುದು, 1902 ನಂಬರನ್ನು ಬ್ಲಾಕ್ ಮಾಡಿರುವುದು ಸರ್ಕಾರದ ಮತ್ತು ಇಲಾಖೆಯ ಗಮನಕ್ಕೆ ಬಂದಿರುತ್ತದೆ ಎಂದು ಉಲ್ಲೇಖ(4)ರ ಪತ್ರದಲ್ಲಿ ತಿಳಿಸಲಾಗಿರುತ್ತದೆ.

ಆದುದರಿಂದ L1, L2 ಮತ್ತು L3 ಅಧಿಕಾರಿಗಳು ಪ್ರತಿದಿನ ಕಡ್ಡಾಯವಾಗಿ IPGRSನ ವೆಬ್‌ಸೈಟ್‌ಗೆ ನೋಂದಣಿಯಾಗಿರುವ ಮೊಬೈಲ್ ಸಂಖ್ಯೆಯಿಂದ ಪ್ರತಿ ದಿನ ಲಾಗಿನ್ ಮಾಡಿ ನಂತರ ಬರುವ OTP/ODPಯನ್ನು ನಮೂದಿಸಿ ಕುಂದುಕೊರತೆಗಳು/ದೂರುಗಳನ್ನು ನಿವಾರಿಸಲು ಮತ್ತೊಮ್ಮೆ ಸೂಚಿಸಲಾಗಿದೆ. ಈ ವಿಷಯವನ್ನು ಅತೀ ಜರೂರು ಎಂದು ಪರಿಗಣಿಸಿ ನಿಗಧಿತ ಅವಧಿಯೊಳಗೆ ಕುಂದುಕೊರತೆಗಳು/ದೂರುಗಳನ್ನು ವಿಲೇ ಮಾಡದೇ ಇದ್ದಲ್ಲಿ ಸಂಬಂಧಪಟ್ಟ L1, L2 ಮತ್ತು L3 ಅಧಿಕಾರಿಗಳ ಮೇಲೆ ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8 ರ ಪ್ರಕಾರ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.

ಟಿಪ್ಪಣಿಯು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ.

**ಜಂಟಿ ನಿರ್ದೇಶಕರು (ಆಡಳಿತ)**
ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ: ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ,

1. ಎಲ್ಲಾ ಸರ್ಕಾರಿ / ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು, ಸರ್ಕಾರಿ / ಅನುದಾನಿತ ಪಾಲಿಟೆಕ್ನಿಕ್‌ಗಳು, ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಪ್ರಾಂಶುಪಾಲರುಗಳಿಗೆ (L1 ಅಧಿಕಾರಿಗಳು)
2. ಆಯುಕ್ತರ ಆಪ್ತಶಾಖೆಗೆ.
3. ನಿರ್ದೇಶಕರ ಆಪ್ತಶಾಖೆಗೆ
4. ಆಯುಕ್ತಾಲಯದ L2 ಮತ್ತು L3 ಅಧಿಕಾರಿಗಳಿಗೆ.
5. ಇ-ಆಡಳಿತ ವಿಭಾಗಕ್ಕೆ – ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು.